12

ಶ್ರೀ ಶರಣಪ್ಪ ಮಟ್ಟೂರು, ಮಾನ್ಯ ಸದಸ್ಯರು, ಕರ್ನಾಟಕ ವಿಧಾನ ಪರಿಷತ್ತು ಇವರು 330ಎ ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.

**ವಿಷಯ:**

ರಾಜ್ಯದಲ್ಲಿರುವ ಸರ್ಕಾರಿ ಪದವಿ ಪ್ರಾಧ್ಯಾಪಕರಿಗೆ ವೇತನ ನೀಡಿ ಅನುದಾನಿತ ಪದವಿ ಕಾಲೇಜಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಧ್ಯಾಪಕರುಗಳಿಗೆ ತಾರತಮ್ಯ ಮಾಡಿ ಕಳೆದ 2 ತಿಂಗಳಿಂದ ವೇತನ ಪಾವತಿಯಾಗಿರುವುದಿಲ್ಲ. ಇದರಿಂದ ಅವರು ವೇತನವಿಲ್ಲದೇ ಪರದಾಡುವಂತಾಗಿದೆ. ಆದುದ್ದರಿಂದ ಶೂನ್ಯ ವೇಳೆಯಲ್ಲಿ ಪ್ರಾಧ್ಯಾಪಕರುಗಳಿಗೆ ವೇತನ ಪಾವತಿಸುವಂತೆ ವಿಷಯ ಪ್ರಸ್ತಾಪಿಸಲು ಅವಕಾಶ ಮಾಡಿಕೊಡಲು ಕೋರುತ್ತೇನೆ.

**ಉತ್ತರ:**

ಸರ್ಕಾರದಿಂದ ದಿನಾಂಕ:02.03.2020ರಂದು ರೂ. 151,22,31,000/- ಕಾಲೇಜು ಶಿಕ್ಷಣ ಆಯುಕ್ತರಿಗೆ ಬಿಡುಗಡೆಯಾಗಿದ್ದು, ಕಾಲೇಜು ಶಿಕ್ಷಣ ಆಯುಕ್ತರು ದಿನಾಂಕ:03.03.2020ರಿಂದ 07.03.2020ರವರೆಗೆ ಇಲಾಖೆಯ ಜಂಟಿ ನಿರ್ದೇಶಕರುಗಳಿಗೆ ಹಣ ಬಿಡುಗಡೆ ಮಾಡಿದ್ದು, ಜಂಟಿ ನಿರ್ದೇಶಕರುಗಳು ದಿನಾಂಕ:09.03.2020ರಂದು ವೇತನ ಬಿಲ್ಲುಗಳನ್ನು ತಯಾರಿಸಿ ಶೇ 95 ರಷ್ಟು ಕಾಲೇಜುಗಳ ಪ್ರಾಧ್ಯಾಪಕರುಗಳಿಗೆ ಜಂಟಿ ನಿರ್ದೇಶಕರುಗಳು ವೇತನವನ್ನು ಪಾವತಿ ಮಾಡಿರುತ್ತಾರೆ ಉಳಿದ ಕಾಲೇಜುಗಳಿಗೆ ಸದ್ಯದಲ್ಲಿಯೇ ಪಾವತಿ ಮಾಡಲು ಜಂಟಿ ನಿರ್ದೇಶಕರುಗಳಿಂದ ಕ್ರಮವಹಿಸುತ್ತಿದ್ದಾರೆ.

(ಡಾ॥ ಅಶ್ವಥ್ ನಾರಾಯಣ ಸಿ.ಎನ್)
ಮಾನ್ಯ ಉಪ ಮುಖ್ಯಮಂತ್ರಿಗಳು